SRI H. C. SRIKANTAIAH (Minister for Municipal Administration).—

(*a*) Yes.

(*b*) Administrative sanction has been given to this scheme. Care will be taken to execute the same without delay.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಮಂತ್ರಿಯವರು ಪ್ರಶ್ನೆಗೆ ಉತ್ತರವಾಗಿ ಚನ್ನಗಿರಿ ಪಟ್ಟಣದ ನೀರು ಸರಬರಾಜು ಯೋಜನೆಗೆ ಎರಡು ತಿಂಗಳ ಹಿಂದೆಯೇ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟಿರುತ್ತೇವೆ, ಆದಷ್ಟು ಜಾಗ್ರತೆಯಾಗಿ ಈ ಯೋಜನೆಯನ್ನು ಕಾರ್ಯಗತ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ರೀತಿಯಾದ ಯೋಜನೆಗಳಿಗೆ ಮಂಜೂರಾತಿ ದೊರಕಿದ್ದರೂ ಕೆಲಸ ಮಾತ್ರ ತಡವಾಗಿಯೇ ನಡೆಯುತ್ತಿರುತ್ತದೆ, ಉದಾಹರಣೆಗೆ ಹೇಳುವುದಾದರೆ ನಮ್ಮ ಕಾಗನೂರು ಹಳ್ಳಿಯಲ್ಲಿ ನೀರು ಸರಬರಾಜು ಯೋಜನೆಗೆ ಎರಡೂವರೆ ವರ್ಷದ ಹಿಂದೆ ೧೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದರು ಇನ್ನೂ ಕೆಲಸ ಶುರುವಾಗಿಯೇ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ವಾಸ್ತವಿಕವಾಗಿ ಪರಿಶೀಲಿಸುವುದಕ್ಕೆ ಪ್ರಯತ್ನಪಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎನ್. ಆರ್. ಡಬ್ಲ್ಯೂ. ಸ್ಕೀಮ್‌ನಲ್ಲಿ ನಾವು ಕೆಲಸವನ್ನು ಶುರುಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿಲ್ಲ. ಆದರೂ ಚನ್ನಗಿರಿ ಪಟ್ಟಣದ ನೀರು ಸರಬರಾಜು ಯೋಜನೆಗೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟಿರುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಆದಷ್ಟು ಜಾಗ್ರತೆಯಾಗಿ ಕೆಲಸವನ್ನು ಪ್ರಾರಂಭಿಸಬೇಕೆಂದು ಸೂಚನೆ ಕೊಡುತ್ತೇನೆ.

Payment of Revenue Assessment in Instalments

195. SRI S. M. SHEERANALY CHANDRASHEKAR (Hosanagar).—Will the Minister for Revenue be pleased to state:—

(*a*) whether it is a fact that the then Revenue Minister had promised that farmers will be allowed to pay in instalments the enchanced revenue assessment over a period of 12 years;

(*b*) whether it has come to the notice of the Government that collecting the assessment was made forcibly during Governor's regime;

(*c*) if so, whether Government intend to issue instructions to the concerned authorities not to use force in collecting 12 years assessment?

SRI B. BASAVALINGAPPA (Minister for Revenue).—

(*a*) No.

(*b*) No.

(*c*) Does not arise.

---

† indicates that remarks or speeches have not been revised by the member concerned.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ನಿಜವಲ್ಲವೆಂದು ಹೇಳಿದ್ದಾರೆ. ಇದರಿಂದ ಮುಂದೆ ಪ್ರಶ್ನೆ ಕೇಳುವ ಆವಶ್ಯಕತೆಯೇ ಕಂಡುಬರುವುದಿಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಹುಚ್ಚಮಾಸ್ತಿ ಗೌಡರು ಕಂದಾಯವನ್ನು ರದ್ದು ಮಾಡುವಂಥ ವ್ಯವಸ್ಥೆಯನ್ನು ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು ಆ ಆಶ್ವಾಸನೆಯ ಮೇರೆಗೆ ಇದನ್ನು ಜಾರಿಗೆ ತರುತ್ತೀರಾ ಎಂದು ಕೇಳುತ್ತಿದ್ದೇನೆ.

† SRI B. BASAVALINGAPPA.— The land revenue in the State was revised in 1965–66 as it was due for revision. The revised rates were approved by the State Legislature in 1965 but there was some objection in respect of the revised rates applicable in the four zones *viz.*, Shimoga Zone, Mysore–Hunsur, Bijapur Zone, Chickmaglur–Hassan Zone. Having regard to the objection raised, the Government after due consideration decided to revise the rates in respect of these four zones. The modified rates were approved by the Legislature in 1976. These rates were announced by a Government notification dated 10th September 1976 and the modified rates have come into effect from 1965–66. The demand raised naturally imposes a difficulty for the previous period beginning from 1965. This is the actual position.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಆ ನಂತರ ೧೯೭೫ನೇ ಇಸವಿಯಲ್ಲಿ ಸೆಟಲ್‌ಮೆಂಟ್ ಆಯಿತು. ಕಂದಾಯ ಎಷ್ಟೆಷ್ಟು ಇತ್ತು ಅದರ ೧೦ ಪಟ್ಟು ಜಾಸ್ತಿಯಾಯಿತು. ಈ ರೀತಿಯಾಗಿರುವುದರಿಂದ ರೈತನು ತನ್ನ ಆಸ್ತಿಯನ್ನು ಮಾರಿದರೂ ಕೂಡ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಲೆಕ್ಕದಲ್ಲಿ ಸರಸ್ವತಿ ಪ್ರಸನ್ನವಾಗಿದೆಯೇ ಹೊರತು ಲಕ್ಷ್ಮೀ ಪ್ರಸನ್ನವಾಗಲು ಸಾಧ್ಯವಿಲ್ಲ. ೧೯೭೫ರ ನಂತರ ಕಂದಾಯವನ್ನು ಕಡ್ಡಾಯವಾಗಿ ವಸೂಲುಮಾಡಬೇಕೆಂಬ ಆದೇಶವಿದ್ದರೂ ೧೯೭೪ರ ಹಿಂದಕ್ಕೆ ಹೋಗಲಿಕ್ಕೆ ಏನು ಕಾರಣವೆಂದು ಕೇಳುತ್ತಿದ್ದೇನೆ ? ಮತ್ತೆ ಈರೀತಿ ವಸೂಲು ಮಾಡಿದರೆ ಒಬ್ಬನ ತಲೆ ಮೇಲೆ ೪೦ ಸಾವಿರದಿಂದ ಹಿಡಿದು ೫೦ ಸಾವಿರ ರೂಪಾಯಿಗಳ ಹೊರೆಹೊತ್ತು ಬೀಳುತ್ತದೆ. ಆದ್ದರಿಂದ ಇದನ್ನು ತಪ್ಪಿಸಲು ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಯಾವರೀತಿ ಕಂದಾಯವನ್ನು ವಸೂಲು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಕೊಟ್ಟಿದೆ. ನಾಲ್ಕು ಕಂತುಗಳ ಪ್ರಕಾರ ಕಂದಾಯವನ್ನು ವಸೂಲು ಮಾಡಬೇಕೆಂದಿದ್ದು, ಇದರಲ್ಲಿ ಏನು ಕಷ್ಟಗಳು ಉದ್ಭವವಾಗುವುದೆಂಬುದನ್ನೂ ಕೂಡ ಸರ್ಕಾರ ಯೋಚನೆ ಮಾಡುತ್ತಿದೆ. ಮತ್ತೆ ರಿಯಾಯಿತಿ ಕೊಡುವುದರ ಬಗ್ಗೆ ಅಂದರೆ ತೆರಿಗೆ ಹಾಕುವುದರಲ್ಲಿ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ ಅಂತಹವನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇನೆ. ಈಗ ನಾಲ್ಕು ಕಂತುಗಳಲ್ಲಿ ಏನು ಕೊಡಬೇಕೆಂದು ಹೇಳಿದ್ದೇವೆ ಅದನ್ನು ಕೊಡಲೇ ಬೇಕಾಗುತ್ತದೆ. ೧೨ ವರ್ಷಗಳಿಂದಲೂ ಯಾವ ವಿಧವಾದ ಕಂದಾಯವನ್ನು ವಸೂಲು ಮಾಡಿಲ್ಲ. ಆದ್ದರಿಂದ ಈಗ ವಸೂಲು ಮಾಡಲೇಬೇಕಾಗಿರುತ್ತದೆ.

Rehabilitation of Persons under Chakkra Project

201 SRI KADIDAL DIVAKAR (Thirthahalli)—Will the Minister of State for Information and Youth Services be pleased to state :—

(*a*) the action taken by the Government for rehabilitation and payment of compensation to the persons who lost their lands under the Chakkra and Savehaklu Irrigation Projects;